ಎಸ್‌ಡಿಎಸ್ ಕ್ಷಯರೋಗ ಸಂಶೋಧನಾ ಕೇಂದ್ರ ಮತ್ತು ರಾಜೀವ್ ಗಾಂಧಿ ಎದೆರೋಗಗಳ ಸಂಸ್ಥೆ, ಬೆಂಗಳೂರು-560029 ಇಲ್ಲಿ ಖಾಲಿ ಇರುವ ವಿವಿಧ ಬೋಧಕ ಮತ್ತು ಬೋಧಕೇತರ ವೈದ್ಯಾಧಿಕಾರಿ ಹುದ್ದೆಗಳ ನೇಮಕಾತಿಗಾಗಿ ದಿನಾಂಕ: 17.02.2018 ರಂದು ಬೆಳಿಗೆ: 10.30 ಗಂಟೆಗೆ ಕೊಠಡಿ ಸಂಖ್ಯೆ: 601, ಎಮ್.ಎಸ್.ಕಟ್ಟಡ, ಬೆಂಗಳೂರು ಇಲ್ಲಿ ಸಂದರ್ಶನದ ಮುಖೇನ ಆಯ್ಕೆ ಮಾಡಲು ಜರುಗಿದ ಆಯ್ಕೆ ಸಮಿತಿ ಸಭೆಯ ನಡವಳಿ:

**ಹಾಜರಿದ್ದ ಸದಸ್ಯರು:**

1. **ವಿ.ಮಂಜುಲ, ಭಾ.ಆ.ಸೇ**
   ಅಪರ ಮುಖ್ಯಕಾರ್ಯದರ್ಶಿಯವರು,
   ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
   (ವೈದ್ಯಕೀಯ ಶಿಕ್ಷಣ), ಎಮ್.ಎಸ್. ಕಟ್ಟಡ, ಬೆಂಗಳೂರು. — ಅಧ್ಯಕ್ಷರು

2. **ಡಾ॥ ಸಚ್ಚಿದಾನಂದ**
   ನಿರ್ದೇಶಕರು,
   ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ,
   ಆನಂದರಾವ್ ವೃತ್ತ, ಬೆಂಗಳೂರು. — ಸದಸ್ಯರು

3. **ಶ್ರೀ ಸಾಭೀರ್ ಅಹಮ್ಮದ್ ಮುಲ್ಲಾ**
   ಉಪ ನಿರ್ದೇಶಕರು,
   ಸಮಾಜ ಕಲ್ಯಾಣ ಇಲಾಖೆ,
   ಎಮ್.ಎಸ್.ಕಟ್ಟಡ, ಬೆಂಗಳೂರು. — ಸದಸ್ಯರು

4. **ಡಾ॥ ಎಂ.ಡಿ.ಪಾಟೀಲ್**
   ಪ್ರಾಧ್ಯಾಪಕರು ಹಾಗೂ ವಿಭಾಗದ ಮುಖ್ಯಸ್ಥರು,
   ಕಾರ್ಡಿಯೋಥೋರಾಸಿಕ್ ವಿಭಾಗ,
   ಬಿ.ಎಂ.ಸಿ.ಆರ್.ಐ, ಬೆಂಗಳೂರು. — ಸದಸ್ಯರು

5. **ಡಾ॥ ಶಶಿಭೂಷಣ್ ಬಿ.ಎಲ್**
   ಪ್ರಾಧ್ಯಾಪಕರು
   ಶ್ವಾಸಕೋಶ ಶಾಸ್ತ್ರ ವಿಭಾಗ,
   ಬಿ.ಎಂ.ಸಿ.ಆರ್.ಐ, ಬೆಂಗಳೂರು. — ಸದಸ್ಯರು

6. **ಡಾ॥ ಅಕ್ಷತಾ ಜೆ.ಎಸ್**
   ಸಹ ಪ್ರಾಧ್ಯಾಪಕರು
   ಶ್ವಾಸಕೋಶ ಶಾಸ್ತ್ರ ವಿಭಾಗ,
   ಎಸ್.ಡಿ.ಎಸ್. ಟಿಆರ್‌ಸಿ ಮತ್ತು ಆರ್‌ಜಿಐಸಿಡಿ, ಬೆಂಗಳೂರು. — ಸದಸ್ಯರು

7. **ಡಾ॥ ನಾಗರಾಜ .ಸಿ**
   ನಿರ್ದೇಶಕರು,
   ಎಸ್.ಡಿ.ಎಸ್. ಟಿಆರ್‌ಸಿ ಮತ್ತು ಆರ್‌ಜಿಐಸಿಡಿ, ಬೆಂಗಳೂರು. — ಸದಸ್ಯ ಕಾರ್ಯದರ್ಶಿ



(Medical Education)

ಸದಸ್ಯ ಕಾರ್ಯದರ್ಶಿಯವರು ಆಯ್ಕೆ ಸಮಿತಿಯ ಅಧ್ಯಕ್ಷರು ಹಾಗೂ ಇತರೆ ಸದಸ್ಯರುಗಳನ್ನು ಸಭೆಗೆ ಆಹ್ವಾನಿಸಿ ಸಭೆಯನ್ನು ಜರುಗಿಸಿಕೊಡುವಂತೆ ಅಧ್ಯಕ್ಷರನ್ನು ಕೋರಿದರು.

ಮುಂದುವರೆದು, ಈ ಸಂಸ್ಥೆಯ ನಿರ್ದೇಶಕರು ಪ್ರಾಧ್ಯಾಪಕರ ಎರಡು ಹುದ್ದೆಗಳು, ಸಹ ಪ್ರಾಧ್ಯಾಪಕರ ಒಂದು ಹುದ್ದೆ, ಸಹಾಯಕ ಪ್ರಾಧ್ಯಾಪಕರ 06 ಹುದ್ದೆಗಳು ಹಾಗೂ 04 ತಜ್ಞರ ಹುದ್ದೆಗಳಿಗಾಗಿ ದಿನಾಂಕ:20.11.2017 ರಂದು ಅಧಿಸೂಚನೆ ಹೊರಡಿಸಲಾಗಿದ್ದು, ಇದನ್ನು ಸಂಸ್ಥೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಿ ದಿನಾಂಕ: 04.12.2017 ರ ಒಳಗೆ ಅರ್ಜಿ ಸಲ್ಲಿಸುವಂತೆ ತಿಳಿಸಲಾಗಿತ್ತು, ಇದರ ಸಂಕ್ಷಿಪ್ತ ಮಾಹಿತಿಯನ್ನು ದಿನಾಂಕ: 24.11.2017 ರ ಟೈಮ್ಸ್ ಆಫ್ ಇಂಡಿಯಾ ಹಾಗೂ ಕನ್ನಡ ಪ್ರಭ ದಿನಪತ್ರಿಕೆಯಲ್ಲಿ ಪ್ರಕಟಿಸಿರುವುದಾಗಿಯೂ ಮತ್ತು ಅಭ್ಯರ್ಥಿಗಳಿಗೆ ಇನ್ನೂ ಹೆಚ್ಚಿನ ಕಾಲಾವಕಾಶ ನೀಡುವ ದೃಷ್ಟಿಯಿಂದ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕವನ್ನು 16.12.2017 ರವರೆಗೆ ವಿಸ್ತರಿಸಲಾಗಿದ್ದು ಈ ಪ್ರಕಟನೆಯು ದಿನಾಂಕ: 10.12.2017 ರ ಟೈಮ್ಸ್ ಆಫ್ ಇಂಡಿಯಾ ದಿನಪತ್ರಿಕೆಯಲ್ಲಿ ಪ್ರಕಟಗೊಂಡಿರುವ ಮಾಹಿತಿಯನ್ನು ಅಧ್ಯಕ್ಷರ ಗಮನಕ್ಕೆ ತಂದರು.

ಅಲ್ಲದೆ ಸಂಸ್ಥೆಯು ತನ್ನದೇ ಆದ ವೃಂದ ಮತ್ತು ನೇಮಕಾತಿ ನಿಯಮವನ್ನು ರೂಪಿಸಿಕೊಂಡಿಲ್ಲವಾದ್ದರಿಂದ ದಿನಾಂಕ: 25.05.2015 ರಂದು ನಡೆದ ಸಂಸ್ಥೆಯ ಆಡಳಿತ ಮಂಡಳಿಯಲ್ಲಿ ಅನುಮೋದನೆಗೊಂಡಿರುವಂತೆ ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ಅನುಸರಿಸುವ ನೇಮಕಾತಿ ನಿಯಮಗಳನ್ನೇ ಈ ನೇಮಕಾತಿಯಲ್ಲಿ ಅನುಸರಿಸುವುದಾಗಿ ಹಾಗೂ ಬೋಧಕ ಸಿಬ್ಬಂದಿಗೆ ಎಂಸಿಐ ನಿಯಮಾನುಸಾರ ಇರಬೇಕಾದ ಎಲ್ಲಾ ಅರ್ಹತೆಗಳನ್ನು ಹಾಗೂ ಸರ್ಕಾರದಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುವ ನೇಮಕಾತಿ ನಿಯಮಗಳನ್ನು ಅಳವಡಿಸಿಕೊಂಡಿರುವ ಬಗ್ಗೆ ಅಧಿಸೂಚನೆಯಲ್ಲಿ ತಿಳಿಸಿರುವುದಾಗಿಯೂ ಸಹ ತಿಳಿಸಿದರು. ಈ ಹುದ್ದೆಗಳ ವಿವರ ಹಾಗೂ ವರ್ಗೀಕರಣದ ಮಾಹಿತಿಯನ್ನು ಈ ಕೆಳಕಂಡಂತೆ ವಿವರಿಸಿದರು.

ಈ ಹುದ್ದೆಗಳಿಗೆ ಸರ್ಕಾರಿ ಅದೇಶ ಸಂಖ್ಯೆ: ಸಿಆಸುಇ.08.ಸಇಮ 95 ಬೆಂಗಳೂರು, ದಿನಾಂಕ: 20.06.1995 ರನ್ವಯ ಮೀಸಲಾತಿ ಕಲ್ಪಿಸಿಕೊಳ್ಳಲಾಗಿದ್ದು, ಸರ್ಕಾರಿ ಆದೇಶ ಸಂಖ್ಯೆ: ಡಿಪಿಎಆರ್.06.ಪಿಎಲ್‌ಎಕ್ಸ್ 2012, ಬೆಂಗಳೂರು, ದಿನಾಂಕ: 06.11.2013 ರನ್ವಯ ಹೈದ್ರಾಬಾದ್-ಕರ್ನಾಟಕ ಪ್ರದೇಶದ ಅಭ್ಯರ್ಥಿಗಳಿಗೂ ಸಹ ಮೀಸಲಾತಿ ಕಲ್ಪಿಸಿಕೊಂಡಿರುವುದಾಗಿ ತಿಳಿಸಿದರು.

ಈ ಅಧಿಸೂಚನೆಯಲ್ಲಿ ಅರ್ಜಿ ಅಹ್ವಾನಿಸಿರುವ ಹುದ್ದೆಗಳ ವಿವರ ಹಾಗೂ ಮೀಸಲಾತಿ ವರ್ಗೀಕರಣ ಮಾಹಿತಿಯನ್ನು ಕೆಳಕಂಡತೆ ವಿವರಿಸಿದರು.

1. **ಬೋಧಕ ಹುದ್ದೆಗಳು**

| ಕ್ರ.ಸಂ. | ವಿಭಾಗ | ಪ್ರಾಧ್ಯಾಪಕರು | ಸಹ ಪ್ರಾಧ್ಯಾಪಕರು | ಸಹಾಯಕ ಪ್ರಾಧ್ಯಾಪಕರು |
|---|---|---|---|---|
| 01. | ಶ್ವಾಸಕೋಶ ಶಾಸ್ತ್ರ | 01 | 00 | 02 |
| 02. | ಎದೆಗೂಡು ಶಸ್ತ್ರ ಚಿಕಿತ್ಸೆ | 01 | 01 | 04 |
| | **ಒಟ್ಟು** | **02** | **01** | **6** |